ಸೋಮವಾರಪೇಟೆ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ ರವರ ನ್ಯಾಯಾಲಯದಲ್ಲಿ

ಸಿಸಿ ಃ1551/2014 ಪ್ರಾಸಾ –1

ಚಾಸಾ –1

ಸಾಕ್ಷಿದಾರರ ಹೆಸರುಃ ಎಂ.ಬಿ ಭಾಗ್ಯವತಿ

ಗಂಡನ ಹೆಸರುಃ ಬಸವರಾಜಪ್ಪ

ವಯಸ್ಸುಃ 50

ವೃತ್ತಿಃ ಗೃಹಿಣಿ

ವಾಸಸ್ಥಳಃ ಮಣಗಳಿ ಗ್ರಾಮ ಸೋಮವಾರಪೇಟೆ.

ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 30-07-2019

ಎಪಿಪಿ ಯವರಿಂದ ಕಲಂ 299 ರ ಅಡಿಯಲ್ಲಿ ವಿಚಾರಣೆ

ಮುಖ್ಯ ವಿಚಾರಣೆಃ ಎಪಿಪಿಯವರಿಂದ

ನನಗೆ ಚಾಸಾ 2 ಮತ್ತು 5 ಗೊತ್ತಿಲ್ಲ , ನನಗೆ ಚಾಸಾ 4 ಮತ್ತು 5 ರವರ ಪರಿಚಯವಿದೆ. ದಿಃ 09-11-2013 ರಂದು ನಾನು ಶನಿವಾರಸಂತೆಗೆ ಸಂತೆ ಸಾಮಾನುಗಳು ತೆಗೆದುಕೊಂಡು ಬರಲು ಹೋಗಿದ್ದು , ಮದ್ಯಾಹ್ನ 2 ಗಂಟೆ ಸಮಯದಲ್ಲಿ ಐ.ಬಿ ಕಡೆಯಿಂದ ಮನೆಯ ಕಡೆ ನಡೆದುಕೊಂಡು ಹೋಗುತ್ತಿರುವಾಗ , ನನ್ನ ಹಿಂದಿನಿಂದ ಒಂದು ಹೆಂಗಸು ಬಂದು ನನ್ನ ಕಾಲನ್ನು ತುಳಿದಿರುತ್ತಾಳೆ. ಆಗ ನಾನು ಏಕೆ ತುಳಿದೆ ಎಂದು ಕೇಳಿದಾಗ ನನ್ನನ್ನು ಕ್ಷಮಿಸು ಎಂಬುವುದಾಗಿ ಹೇಳಿ ನನ್ನ ತಲೆಯನ್ನು ಮುಟ್ಟಿದಳು. ಆಗ ನನಗೆ ಪ್ರಜ್ಞೆ ತಪ್ಪಿದಂತೆ ಆಗಿರುತ್ತದೆ. ನನಗೆನಂತರದಲ್ಲಿ ಪ್ರಜ್ಞೆ ಬಂದಾಗ ನಾನು ನಿರೀಕ್ಷಣಾ ಮಂದಿರದ ಮುಂದೆ ಬಂದು ಕುಳಿತಿದ್ದೆ .

ನಂತರ ನನ್ನ ವ್ಯಾನಿಟಿ ಬ್ಯಾಗ್ ನೋಡಿದಾಗ ವ್ಯಾನಿಟ ಬ್ಯಾಗ್ ತೆರೆದುಕೊಂಡಿದ್ದು ಅದರಲ್ಲಿ ಚಿನ್ನದಂತಿಯವ ನಕಳಿ ತಾಳಿ ಹಾಗೂ ಲಕ್ಷ್ಮೀಕಾಸಿನ 2 ಸರಗಳು ಇರುವುದು ಕಂಡು ಬಂತು . ಅವನ್ನು ಕಂಡು ನಾನು ಗಾಬರಿಗೊಂಡು ನನ್ನ ಕುತ್ತಿಗೆಯನ್ನು ಮುಟ್ಟಿ ನೋಡಿದಾಗ ನನ್ನ ಕುತ್ತಿಗೆಯಲ್ಲಿದ್ದ 25 ಗ್ರಾಂ. ಬಂಗಾರದ ಸರ ಕಾಣೆಯಾಗಿತ್ತು . ನಂತರ ನಾನು ಈ ಬಗ್ಗೆ ಪೋಲಿಸರಿಗೆ ಆ ಮಹಿಳೆಯನ್ನು ಪತ್ತೆ ಹಚ್ಚುವಂತೆ ದೂರನ್ನು ಸಲ್ಲಿಸಿಕೊಂಡಿರುತ್ತೇನೆ. ದೂರನ್ನು ಈಗ ನೋಡುತ್ತಿದ್ದು ದೂರನ್ನು ನಿಪಿ1 ಎಂದು , ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು.

ಮಾರನೆ ದಿನ ಪೋಲಿಸರು ಕೃತ್ಯ ಸ್ಥಳಕ್ಕೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಚಾಸಾ 4 ಮತ್ತು 5 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಸಮಯದಲ್ಲಿ ನನ್ನ ವ್ಯಾನಿಟಿ ಬ್ಯಾಗ್ ನಲ್ಲಿದ್ದ ನಕಲಿ ಸರಗಳನ್ನು ಪೋಲಿಸರು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ನಕಲಿ ಸರಗಳನ್ನು

ನೋಡಿದರೆ ನಾನು ಗುರುತಿಸುತ್ತೇನೆ. ಹಲವು ದಿನಗಳ ನಂತರ ಸುಂಟಿಕೊಪ್ಪ ಪೋಲಿಸ್ ಠಾಣೆಯವರು ನನ್ನನ್ನು ಕರೆದು ಒಂದು ಹೆಂಗಸನ್ನು ದಸ್ತಗಿರಿ ಮಾಡಿದ್ದು ಆಕೆಯನ್ನು ನೋಡಿ ನಾನು ಗುರುತಿಸಿರುತ್ತೇನೆ , ಆಕೆಯ ನನ್ನ ಸರವನ್ನು ಕದ್ದ ವ್ಯಕ್ತಿಯಾಗಿರುತ್ತಾಳೆ. ಆದರೆ ನನ್ನ ಸರವು ನನಗೆ ಸಿಕ್ಕಿರುವುದಿಲ್ಲ. ಆರೋಪಿಯನ್ನು ಮುಂದೆ ನೋಡಿದರೆ ಗುರುತಿಸುತೇನೆ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮ್ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ ಸೋ ಪೇಟೆ